**II<u>ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ ಬೆಳಗಾವಿ</u>**

**OS No.902/2015**
**PW.1**

<u>ದಿನಾಂಕಃ **10.09.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.</u>
<u>ಮುಂದುವರೆದ ಪಾಟೀ ಸವಾಲು **3**ನೇ ಪ್ರತಿವಾದಿಪರ ಶ್ರೀಃ **MMS** ವಕೀಲರಿಂದ.</u>

3ನೇ ಪ್ರತಿವಾದಿ ಸರ್ವೆ ನಂ.131ನೇದರಲ್ಲಿರುವ ಪ್ಲಾಟುಗಳಲ್ಲಿನ ಒಬ್ಬ ಮಾಲೀಕರು ಆಗಿರುವುದರಿಂದ ಅವರನ್ನು ಪಕ್ಷಗಾರರನ್ನಾಗಿ ಮಾಡಿರುತ್ತೇನೆ.

**ಪ್ರಶ್ನೆಃ ತಾವು 1ನೇ ವಾದಿಯಾದ ಉಜ್ವಲ ನಿಮ್ಮ ಹೆಂಡತಿಯ ಜೊತೆ ಈ ದಾವೆಯಲ್ಲಿ ಯಾಕೆ ಪಕ್ಷಗಾರರಾಗಿ ಸೇರಿರುತ್ತೀ?**

**ಉತ್ತರಃ 3ನೇ ಪ್ರತಿವಾದಿ ಲೇಸೆನ್ಸನ್ನು ಕ್ಯಾನ್ಸಲ್ ಮಾಡಲು 5ನೇ ಪ್ರತಿವಾದಿಗೆ ಅಪ್ರೋಚ್ ಆಗಿರುವುದರಿಂದ ನಾನು ಪಕ್ಷಗಾರನಾಗಿ ಸೇರಿರುತ್ತೇನೆ.**

3ನೇ ಪ್ರತಿವಾದಿ 5ನೇ ಪ್ರತಿವಾದಿಗೆ ನೀಡಿದ ದೂರಿನ ಕುರಿತು ನಾನು ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ. ಯಾವುದೇ ದಾಖಲೆಗೆಳನ್ನು ಹಾಜರು ಪಡಿಸದೆ ಇದ್ದರು ಸಹ ಹಾಜರು ಪಡಿಸಿರುತ್ತೇನೆ ಎಂದು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ. ನನ್ನದಾಗಲಿ ಹಾಗೂ ನನ್ನ ಹೆಂಡತಿಯ ಆಸ್ತಿಯಾಗಲಿ 2ನೇ ಪ್ರತಿವಾದಿಯ ಅಡಿಯಲ್ಲಿ ಬರುವುದಿಲ್ಲ ಎಂದರೆ ಸರಿ. ಕಂದಾಯ ಅಧಿಕಾರಿಗಳೊಂದಿಗೆ 3ನೇ ಪ್ರತಿವಾದಿ ಶಾಮೀಲು ಆಗಿ ME No.6173/2002-03ನೇದನ್ನು ಪಡೆದುಕೊಂಡಿರುತ್ತಾರೆ ಎಂದು ನನ್ನ ದಾವೆಯಲ್ಲಿ ಸುಳ್ಳು ಆಪಾದನೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ME ನಂ.6173/2002-03ನ್ನು ಸಕ್ಷಮ ಪ್ರಾಧಿಕಾರದಲ್ಲಿ ನಾನು ಪ್ರಶ್ನಿಸಿಲ್ಲ. ಪ್ರಶ್ನಿಸಲು ನನಗೆ ಯಾವುದೇ ತೋಂದರೆ ಇರಲಿಲ್ಲ. ಸದರಿ ME No.6173/2002-03 (ನಿಜ) ಸರಿಯಾಗಿ ಇರುವುದರಿಂದ ನಾನು ಪ್ರಶ್ನಿಸಿಲ್ಲ ಎಂದರೆ ಸರಿಯಲ್ಲ. ಈ ಕುರಿತು ನಾನು 5ನೇ ಪ್ರತಿವಾದಿಯೊಂದಿಗೆ ಪತ್ರ ವ್ಯವಹಾರ ಮಾಡಿ ಕೇಳಿರುವುದಿಲ್ಲ. ದಾವಾ ಸ್ವತ್ತಿನ ಶಾಲೆ 5ನೇ ಪ್ರತಿವಾದಿ ಅಧಿಕಾರ ವ್ಯಾಪ್ತಿಗೆ ಬರುವುದಿಲ್ಲ ಎಂದರೆ ಸರಿ. ಸದರಿ ಶಾಲೆಯ ಲೇಸೆನ್ಸ ಕುರಿತು 4 ನೇ

ಪ್ರತಿವಾದಿಯೊಂದಿಗೆ ಪತ್ರ ವ್ಯವಹಾರ ಮಾಡಿರುತ್ತೇನೆ. ನಾನು ವಿಚಾರಿಸಿರುತ್ತೇನೆ ಯಾವುದೇ ದೂರು ನೀಡಿರುವುದಿಲ್ಲ. ಸದರಿ ದೂರಿನ ಪ್ರತಿ ಇರುತ್ತದೆ ಆದರೆ ಹಾಜರು ಪಡಿಸಿಲ್ಲ. 3ನೇ ಪ್ರತಿವಾದಿ ನನ್ನ ದೂರಿಗೆ ಯಾವುದೇ ಪ್ರತ್ಯುತ್ತರ ನೀಡಿರುವುದಿಲ್ಲ. 4ನೇ ಪ್ರತಿವಾದಿ 3ನೇ ಪ್ರತಿವಾದಿಯ ಶಾಲೆಗೆ ಹೋಗಿ ಯಾವುದೇ ವಿಚಾರಣೆ ಮಾಡಿಲ್ಲ. ಈ ಕುರಿತು 4ನೇ ಪ್ರತಿವಾದಿಯನ್ನು ನಾನು ವಿಚಾರಣೆ ಮಾಡಲು ಯಾವುದೇ ತೊಂದರೆ ಇರಲಿಲ್ಲ. 3ನೇ ಪ್ರತಿವಾದಿಯ ಶಾಲೆಯ ಪರವಾನಿಗೆ ಹಾಗೂ ಉಳಿದ ದಾಖಲೆ ಸರಿಯಾಗಿರುವ ಕಾರಣಕ್ಕಾಗಿ 4ನೇ ಪ್ರತಿವಾದಿ ಯಾವುದೇ ವಿಚಾರಣೆ ಮಾಡಿಲ್ಲ ಎಂದರೆ ಸರಿಯಲ್ಲ. 1ನೇ ವಾದಿ ಆಸ್ತಿ ನಮ್ಮ ಆಸ್ತಿಗೆ ಹೊಂದಿಕೊಂಡಿರುತ್ತದೆ ಎಂದರೆ ಸರಿ. ನಮ್ಮ ಆಸ್ತಿಯಲ್ಲಿ LPG ಗ್ಯಾಸ್ ವ್ಯವಹಾರವನ್ನು ಮಾಡುತ್ತೇನೆ. HP ಗ್ಯಾಸ್ ಕಂಪನಿಯವರು ನನಗೆ ಏಜೆನ್ಸಿ ನೀಡಿರುತ್ತಾರೆ. ಸದರಿ ಕಂಪನಿದಯವರು ಆಗಾಗ ಬಂದು ನಮ್ಮ ವ್ಯವಹಾರದ ಸ್ಥಳವನ್ನು ಪರಿಶೀಲಿಸುತ್ತಾರೆ ಎಂದರೆ ಸರಿ. ನನ್ನ ಹೆಂಡತಿಯಾದ 1ನೇ ವಾದಿ ತನ್ನ ಆಸ್ತಿಯಲ್ಲಿ auto coating and denting painting ವ್ಯವಹಾರ ಮಾಡುತ್ತಾರೆ. ಸದರಿ ಸ್ಥಳದಲ್ಲಿ electricity cabin ಇದ್ದು ಅದರಲ್ಲಿ ಕಾರು ಅದಕ್ಕೆ ನ್ನು painting ಮಾಡಲಾಗುತ್ತದೆ ಎಂದರೆ diesel fir booth ಇರುತ್ತದೆ electricity cabin ಇರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ diesel fir boothಗೆ ವಿದ್ಯುತ್ ಸಂಪರ್ಕ ಇರುತ್ತದೆ ಎಂದರೆ ಸರಿ. ಸದರಿ ಡೆಂಟಿಂಗ್ ವರ್ಕ್ ಮಾಡಲು ವಿದ್ಯುತ್ ಸಂಪರ್ಕ ಬೇಕಾಗುತ್ತದೆ ಎಂದರೆ ಸಾಕ್ಷಿಯು ಎಲೆಕ್ಟ್ರಿಸಿಟಿ ಮತ್ತು ಗ್ಯಾಸ್ ಎರಡರಿಂದಲೂ ಮಾಡಬಹುದು ಎಂದು ನುಡಿಯುತ್ತಾರೆ. ಗ್ಯಾಸ್ ವೆಲ್ಡಿಂಗೆ ನಾಸಲ್ ಇದ್ದು ಅದಕ್ಕೆ ಬೆಂಕಿ ಹಚ್ಚಿದ ನಂತರ ಪ್ರಾರಂಭವಾಗುತ್ತದೆ ಎಂದರೆ ಸರಿ. ಸದರಿ ಗ್ಯಾಸ್ ವೆಲ್ಡಿಂಗೆ ಅಂದರೆ 1ನೇ ವಾದಿಯ ಆಸ್ತಿ, ಪ್ರತಿವಾದಿ 3 ರವರ ಆಸ್ತಿ ಮತ್ತು ನನ್ನ ಆಸ್ತಿಯ ಮಧ್ಯ ಇರುತ್ತದೆ ಎಂದರೆ ಸರಿ. ನಾನು ನಿಯಮಳಿಗಳ ಪ್ರಕಾರ ನನ್ನ ಆಸ್ತಿಗೆ ವಿದ್ಯುತ್ ಸಂಪರ್ಕ ಪಡೆದುಕೊಂಡಿಲ್ಲ ಎಂದರೆ ಸಾಕ್ಷಿಯು ನಮ್ಮ ಆಸ್ತಿಗೆ ವಿದ್ಯುತ್ ಸಂಪರ್ಕನೇ ಪಡೆದುಕೊಂಡಿಲ್ಲ ಎಂದು ನುಡಿಯುತ್ತಾರೆ. 1ನೇ ವಾದಿ ತನ್ನ ಆಸ್ತಿಯಲ್ಲಿ ಗ್ಯಾಸ್ ವೆಲ್ಡಿಂಗ್ ಮಾಡಲು ಎಲೆಕ್ಟ್ರಿಸಿಟಿ

ಮತ್ತು ವಿಧ್ಯುತ್ ಸಂಪರ್ಕ ಬಳಸಿಕೊಂಡು ಕೆಲಸ ಮಾಡುವುದರ ಕುರಿತು ನಾನು ಯಾವುದೇ ದೂರನ್ನು ನೀಡಿಲ್ಲ ಕಾರಣ ನನ್ನ ಆಸ್ತಿಯಿಂದ ಸುಮಾರು 30 ಅಡಿ ದೂರದಲ್ಲಿ ಇರುವುದರಿಂದ ದೂರುಸಲ್ಲಿಸುವ ಪ್ರಮಯ ಇರುವುದಿಲ್ಲ. ನನ್ನ ಆಸ್ತಿಯಿಂದ 3ನೇ ಪ್ರತಿವಾದಿಯ ಶಾಲೆ ಸುಮಾರು 50 ಅಡಿ ಅಂತರದಲ್ಲಿ ಇರುತ್ತದೆ. ನನ್ನ ಆಸ್ತಿಯಲ್ಲಿ ಏನದರು ದುರ್ಗಘಟನೆ ಸಂಭವಿಸಿದರೆ ಪ್ರಥಮವಾಗಿ 1ನೇ ವಾದಿಯ ಆಸ್ತಿಯ ಮೇಲೆ ಪರಿಣಾರಮ ಬೀರುತ್ತದೆ ಎಂದರೆ ಸರಿ. 1ನೇ ವಾದಿಯ ಆಸ್ತಿಯಲ್ಲಿ ಬಹಳಷ್ಟು ಜನ ಕೆಲಸಗಾರರು ಕೆಲಸ ಮಾಡುತ್ತಾರೆ ಎಂದರೆ ಸರಿ.

**(ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ನೀಡಲಾಯಿತು)**

**(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯನ್ನು ಯಥಾವತ್ತಾಗಿ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸರಿಯಿದೆ.**

**ಸಹಿ/-**

**2ನೇ ಹೆಚ್ಚುವರಿ ನ್ಯಾಯಾಲಯ ಮತ್ತು**
**ಜೆ.ಎಂ.ಎಫ್.ಸಿ. ಬೆಳಗಾವಿ**